3) ಸಾಮೂಹಿಕ ನೇಯ್ಗೆ ಕೇಂದ್ರ

4) ವಿದ್ಯುತ್ ಮಗ್ಗಗಳ ಕಾಂಪ್ಲೆಕ್ಸ್‌ಗಾಗಿ ಷೇರು ಬಂಡವಾಳ

5) ಎನ್‌ಸಿಡಿಸಿ ಯೋಜನೆಯಡಿ ರೇಷ್ಮೆ ಸಂಸ್ಕರಣ ಘಟಕ ಸ್ಥಾಪನೆ.

6) ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ.

ಆ) ಸರ್ಕಾರವು ಈ ನಗರದಲ್ಲಿನ ಸುಮಾರು 2[illegible],000 ನೇಕಾರರಿಗೆ ಕಳೆದ 3 ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾರ್ಯಕ್ರಮವನ್ನು ಸಹಕಾರಿ ಸಂಘಗಳ ಮುಖಾಂತರ ಅನುಷ್ಠಾನ ಮಾಡಿರುತ್ತದೆ. ಈ ಇಲಾಖೆಯಿಂದ ಒದಗಿಸಲಾಗಿರುವ ಸೌಲಭ್ಯಗಳ ವಿವರಗಳನ್ನು ಕೆಳಕಾಣಿಸಿದೆ:

ವರ್ಷ	ಯೋಜನೆಯ ಹೆಸರು	ಸಂಘಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳಲ್ಲಿ)
1998-99	ಸರ್ಕಾರಿ ಷೇರು ಬಂಡವಾಳ	2	6.00
1998-99	ಸಾಮೂಹಿಕ ನೇಯ್ಗೆ ಕೇಂದ್ರ	1	7.00
1998-99	ಎನ್‌ಸಿಡಿಸಿ ಯೋಜನೆಯಡಿ ರೇಷ್ಮೆ ಸಂಸ್ಕರಣಾ ಘಟಕ ಸ್ಥಾಪನೆ (ಮಂಜೂರಾತಿ ಆಗಬೇಕಾಗಿದೆ)	1	400.50
1999-2000	ಮಗ್ಗ ಪೂರ್ವ ಸೌಲಭ್ಯ	1	3.00
	ಒಟ್ಟು:	5	496.50
2000-01	ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ	329 ನೇಕಾರರು	0.1316

ದೊಡ್ಡಬಳ್ಳಾಪುರ ನಗರ ಸಭೆಯಲ್ಲಿ ಕಂದಾಯ ಇಲಾಖೆಯಿಂದ ಜಮೀನು

ವಶಪಡಿಸಿಕೊಂಡಿರುವುದು.

1954(2449)

ಶ್ರೀ ಪಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರಸಭೆಯಲ್ಲಿ ಕಂದಾಯ ಇಲಾಖೆಯಿಂದ ನಗರದ ಸುತ್ತಾ 5 ಕಿ.ಮೀ. ಒಳಗೆ ಬರುವ ನಿವೇಶನಗಳಿಗೋಸ್ಕರ ಎಷ್ಟು ಜಮೀನು ವಶಪಡಿಸಿಕೊಂಡಿದ್ದಾರೆ?

ಆ) ಇದರಲ್ಲಿ ನಗರಸಭೆಯವರು ಎಷ್ಟು ನಿವೇಶನಗಳನ್ನು ಮಾಡಿದ್ದಾರೆ; ಹಾಗೂ ಎಷ್ಟು ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; (ವಿವರ ನೀಡುವುದು).

ಇ) ಈ ಜಮೀನನ್ನು ಖಾಸಗಿಯವರು ಎಷ್ಟು ಒತ್ತುವರಿ ಮಾಡಿದ್ದಾರೆ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ) ಎಷ್ಟು ದಿನಗಳಲ್ಲಿ ಸರ್ಕಾರ ಒತ್ತುವರಿ ಜಮೀನನ್ನು ಬಿಡಿಸಿಕೊಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಎಂ.ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) 39.16 ಎಕರೆ.

ಆ, ಇ ಮತ್ತು ಈ) 200 ನಿವೇಶನಗಳನ್ನು ರಚಿಸಲಾಗಿದೆ. 105 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 28.26 ಎಕರೆ ಜಮೀನನ್ನು ಒತ್ತುವರಿ ಮಾಡಲಾಗಿದೆ. ಉಳಿದ ಜಾಗದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುವುದಿಲ್ಲ. ಈ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಇರುವುದರಿಂದ ಹೊಸದಾಗಿ ನಿವೇಶನಗಳನ್ನು ರಚಿಸಲಾಗಿರುವುದಿಲ್ಲ. ನ್ಯಾಯಾಲಯದಲ್ಲಿ ಇತ್ಯರ್ಥವಾದ ಕೂಡಲೇ ಜಮೀನನ್ನು ವಶಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ತುರುವೇಕೆರೆ ತಾಲ್ಲೂಕು ಮುನಿಯಾರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೇಕಾರರಿಗೆ ವಸತಿ ಸೌಕರ್ಯ.

1955(2561)